# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ.9/2, 6 ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಚೇಂಬರ್ಸ್, ಬೆಂಗಳೂರು –560 002.

# ಅಧಿಸೂಚನೆ

**ಸಂಖ್ಯೆ : ವೈ/03/4, ಬೆಂಗಳೂರು, ದಿನಾಂಕ 17 ಫೆಬ್ರವರಿ 2014**

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2014**

**ಪ್ರಸ್ತಾವನೆ :**

ವಿದ್ಯುಚ್ಛಕ್ತಿ ಅಧಿನಿಯಮ 2003 ರ ಅಡಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು 12.11.2004 ರಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) ವಿನಿಯಮಗಳು, 2004 ಅನ್ನು ಪ್ರಕಟಿಸಿ, ದಿನಾಂಕ 16.12.2004 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿಸಿದೆ. ಸದರಿ ವಿನಿಯಮಗಳಿಗೆ ಕೆಲವು ಬದಲಾವಣೆಗಳನ್ನು ತರಲು, ಮೊದಲ ತಿದ್ದುಪಡಿಯನ್ನು ದಿನಾಂಕ 31.5.2006 ರಂದು ಮಾಡಲಾಯಿತು.

ಪ್ರಸ್ತುತ ಚಾಲ್ತಿಯಲ್ಲಿರುವ ವಿನಿಯಮಗಳಲ್ಲಿ, ವಿದ್ಯುತ್ ಸರಬರಾಜು ಲೈಸನ್ಸಿ ಮತ್ತು ವಿದ್ಯುತ್ ಉತ್ಪಾದನಾ ಕಂಪನಿಗಳ ನಡುವೆ ಅಸ್ತಿತ್ವದಲ್ಲಿರುವ ವಿದ್ಯುತ್ ಖರೀದಿ ಒಪ್ಪಂದ ಇದ್ದರೂ ಸಹ, ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಮುಕ್ತ ಅವಕಾಶ ನೀಡದೇ ಇರಲು ಈಗಿನ ವಿನಿಯಮಗಳಲ್ಲಿ ಯಾವುದೇ ನಿರ್ಧಿಷ್ಟ ಅವಕಾಶಗಳು ಇರಲಿಲ್ಲ. ಈ ಸಮಸ್ಯೆಯನ್ನು ನಿವಾರಿಸಲು ಆಯೋಗವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2013 ರ ಕರಡನ್ನು ದಿನಾಂಕ 30.12.2013ರ ರಾಜ್ಯಪತ್ರದಲ್ಲಿ ಪ್ರಕಟಿಸಿ, ಆಸಕ್ತರು ಹಾಗೂ ಭಾಗೀದರರಿಂದ ಅಭಿಪ್ರಾಯ/ಆಕ್ಷೇಪಣೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಲು ಕೋರಿತ್ತು.

ಆಸಕ್ತರು ಹಾಗೂ ಭಾಗೀದಾರರಿಂದ ಬಂದ ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಆಯೋಗವು ಈಗಿರುವ ವಿನಿಯಮಗಳಿಗೆ ಕೆಳಕಂಡಂತೆ ತಿದ್ದುಪಡಿಯನ್ನು ತಂದಿದೆ ;

# ತಿದ್ದುಪಡಿ

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2014**

ವಿದ್ಯುಚ್ಛಕ್ತಿ ಅಧಿನಿಯಮ 2003ರ(2003ರ ಕೇಂದ್ರೀಯ ಕಾಯಿದೆ 36)ಪರಿಚ್ಛೇದ 181ರ ಜೊತೆಗೆ ಓದಿಕೊಳ್ಳಲಾದ ಪರಿಚ್ಛೇದಗಳು 39 (2)(ಡಿ), 40(ಸಿ), 42(2), 42(3) ಮತ್ತು 86(1)(ಸಿ)ರ ಅಡಿಯಲ್ಲಿ ಹಾಗೂ ಇದರ ಪರವಾಗಿ ದತ್ತವಾದ ಇತರ ಎಲ್ಲಾ ಅಧಿಕಾರಗಳ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) ವಿನಿಯಮಗಳು, 2004ಕ್ಕೆ ಈ ಕೆಳಗಿನಂತೆ ತಿದ್ದುಪಡಿಯನ್ನು ಹೊರಡಿಸಿದೆ:

1. **ಕಿರು ಶೀರ್ಷಿಕೆ ಮತ್ತು ಪ್ರಾರಂಭ :**

i. ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕಾಗಿ ನಿಬಂಧನೆ ಮತ್ತು ಷರತ್ತುಗಳು) (ಎರಡನೇ ತಿದ್ದುಪಡಿ) ವಿನಿಯಮಗಳು, 2014 ಎಂದು ಕರೆಯಬಹುದಾಗಿದೆ.

ii. ಈ ವಿನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತದೆ.

iii. ಈ ವಿನಿಯಮಗಳು, ರಾಜ್ಯದ ಪ್ರಸರಣ ಹಾಗೂ ವಿತರಣಾ ಜಾಲವನ್ನು ಉಪಯೋಗಿಸುವ ಎಲ್ಲಾ ಮುಕ್ತ ಅವಕಾಶದ ಗ್ರಾಹಕರಿಗೆ ಹಾಗೂ ಅಂತರ ರಾಜ್ಯ ಪ್ರಸರಣಾ ಜಾಲವನ್ನು ಉಪಯೋಗಿಸುತ್ತಾ ಅದರೊಂದಿಗೆ ರಾಜ್ಯದ ಜಾಲವನ್ನು ಉಪಯೋಗಿಸುವ ಗ್ರಾಹಕರಿಗೆ ಅನ್ವಯಿಸುತ್ತದೆ.

**2. ಈಗಿರುವ ವಿನಿಯಮ 4ರ ನಂತರ ಕೆಳಕಂಡಂತೆ ವಿನಿಯಮ 4(ಎ) ಅನ್ನು ಸೇರಿಸತಕ್ಕದ್ದು.**

4(ಎ). ಮುಕ್ತ ಅವಕಾಶಕ್ಕೆ ತಡೆ : ಈ ವಿನಿಯಮಗಳಲ್ಲಿ ಏನೇ ಇರಲಿ, ವಿದ್ಯುತ್ ಸರಬರಾಜು ಕಂಪನಿಗಳೊಡನೆ ವಿದ್ಯುತ್ ಖರೀದಿ ಒಪ್ಪಂದ ಅಸ್ತಿತ್ವದಲ್ಲಿರುವ ಯಾವುದೇ ವಿದ್ಯುತ್ ಉತ್ಪಾದನಾ ಕಂಪನಿಗಳು ಒಪ್ಪಂದದಲ್ಲಿ ಹೇಳಲ್ಪಟ್ಟ ಸಾಮರ್ಥ್ಯದವರೆಗೆ(ಗೊತ್ತಾದ ವಿದ್ಯುತ್ ಪರಿಮಾಣ), ಒಪ್ಪಂದದ ಷರತ್ತುಗಳಿಗೆ ಹೊರತಾಗಿ, ಮುಕ್ತ ಅವಕಾಶ ಪಡೆಯಲು ಅನುಮತಿ ಇರುವುದಿಲ್ಲ.

ಆಯೋಗದ ಆದೇಶದ ಮೇರೆಗೆ

ಕಾರ್ಯದರ್ಶಿ

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**